ಬಿದರಹಳ್ಳಿ ಹೋಬಳಿಗೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡುವುದು

1777 (2132); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ಬಿದರಹಳ್ಳಿ ಹೋಬಳಿಯ ಕುಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮಂಡೂರು ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿರುವ (Sub Station) ವಿದ್ಯುತ್ ಉಪ ವಿಭಾಗದ ಕಾಮಗಾರಿ ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು;

ಇ) ಸಫಲ್ ಮಾರುಕಟ್ಟೆಯ ವಿದ್ಯುತ್ ಉಪ ವಿಭಾಗಕ್ಕೆ ಪೂರ್ಣ ಪ್ರಮಾಣದ ವಿದ್ಯುತ್ ಸರಬರಾಜು ಮಾಡಲು ಹಾಗೂ ಮಂಡೂರು ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ವಿದ್ಯುತ್ ಉಪ ವಿಭಾಗವನ್ನು ತುರ್ತಾಗಿ ಪೂರ್ಣಗೊಳಿಸಲು ಸಾರ್ವಜನಿಕ ಸೇವೆಗೆ ಲಭ್ಯಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ;

ಈ) ಸಫಲ್ ಮಾರುಕಟ್ಟೆ ವಿದ್ಯುತ್ ಉಪ ವಿಭಾಗಕ್ಕೆ ಅಗತ್ಯವಿರುವ ವಿದ್ಯುತ್ತಿನ ಪ್ರಮಾಣ ಎಷ್ಟು; ಪ್ರಸ್ತುತ ಸರಬರಾಜು ಆಗುತ್ತಿರುವ ವಿದ್ಯುತ್‌ನ ಪ್ರಮಾಣ ಎಷ್ಟು; ಹಾಗೂ ಅಗತ್ಯತೆ ಎಷ್ಟು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಬಿದರಹಳ್ಳಿ ಹೋಬಳಿಯ ವ್ಯಾಪ್ತಿಯಲ್ಲಿನ ಗ್ರಾಮಗಳಿಗೆ ಹಾಲಿ 66/11 ಕೆ.ವಿ. ಸಫಲ್ ಮಾರ್ಕೆಟ್, ಬಾಣಸವಾಡಿ, ಐಟಿಐ, ಹೊಸಕೋಟೆ ವಿದ್ಯುತ್ ಉಪ ಕೇಂದ್ರಗಳಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದ್ದು, ತಾಂತ್ರಿಕ ತೊಂದರೆಯಿಂದಾಗಿ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಸ್ವಲ್ಪ ಪ್ರಮಾಣದ ವಿದ್ಯುತ್ ಕಡಿತ ಮಾಡಲಾಗುತ್ತಿದೆ.

ಆ), ಇ) ಮತ್ತು ಈ) ಮಂಡೂರಿನಲ್ಲಿ ನಿರ್ಮಾಣ ಮಾಡಲಾಗುತ್ತಿರುವ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ಸದರಿ ಉಪ ಕೇಂದ್ರವನ್ನು ಚಾಲನೆಗೊಳಿಸು ಹೊಸಕೋಟೆಯಿಂದ 66 ಕೆ.ವಿ. ಪ್ರಸರಣ ಮಾರ್ಗದ ನಿರ್ಮಾಣ ಕಾಮಗಾರಿಯು ಸ್ಥಳೀಯರ ಅಡಚಣೆಯಿಂದಾಗಿ (RoW problem) ಸ್ಥಗಿತಗೊಂಡಿರುತ್ತದೆ. ಅಡಚಣೆಯನ್ನು ತೆರವುಗೊಳಿಸಲು ಪ್ರಯತ್ನ ನಡೆಸಲಾಗುತ್ತಿದೆ.

66/11 ಕೆ.ವಿ. ಕೋನದಾಸಪುರ (ಸಫಲ್ ಮಾರ್ಕೆಟ್) ವಿದ್ಯುತ್ ಉಪ ಕೇಂದ್ರವನ್ನು ದಿನಾಂಕ 29.06.2014 ರಂದು ಚಾಲನೆಗೊಳಿಸಲಾಗಿರುತ್ತದೆ.

66/11 ಕೆ.ವಿ. ಕಾಡುಗೋಡಿ ವಿದ್ಯುತ್ ಉಪ ಕೇಂದ್ರದಿಂದ 1.37 ಕಿ.ಮೀ. ಉದ್ದದ 66 ಕೆ.ವಿ. ಭೂಗತ ಕೇಬಲ್ ಅಳವಡಿಸಲು ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಯು ಪೂರ್ಣಗೊಂಡ ನಂತರ 66/11 ಕೆ.ವಿ. ಕೋನದಾಸಪುರ (ಸಫಲ್ ಮಾರ್ಕೆಟ್) ವಿದ್ಯುತ್ ಉಪ ಕೇಂದ್ರದಿಂದ ಅಗತ್ಯ ಪ್ರಮಾಣದ ವಿದ್ಯುತ್ ಸರಬರಾಜು ಮಾಡಲಾಗುವುದು.

ಲೋಕೋಪಯೋಗಿ ಇಲಾಖೆಗೆ ಒಳಪಡುವ ರಸ್ತೆಗಳ ದುರಸ್ತಿ

1779 (2134); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ರಾಜ್ಯದ ಲೋಕೋಪಯೋಗಿ ಇಲಾಖೆಗೆ ಒಳಪಡುವ ರಸ್ತೆಗಳು ಎಷ್ಟು ಹಾಗೂ ಅವುಗಳ ಉದ್ದ ಎಷ್ಟು; (ವಿವಿಧ ಕ್ಯಾಟಗರಿಗಳ ವಿವರ ಒದಗಿಸುವುದು)

ಆ) ಈ ರಸ್ತೆಗಳು ಹಾಳಾದಾಗ ದುರಸ್ತಿ ಮಾಡುವ ವ್ಯವಸ್ಥೆ ಏನು;

ಇ) ಹಾಳಾದ ಎಷ್ಟು ದಿನಗಳ ನಂತರ ದುರಸ್ತಿಗೊಳಿಸುವ ವ್ಯವಸ್ಥೆ ಸರ್ಕಾರದಲ್ಲಿ ಇದೆ;